**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

**ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018**

ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸ್ನಾ ಹಾಗೂ ಸ್ನಾ.ಪ/2018–19 ದಿನಾಂಕ: 12.02.2019

## ಅಧಿಸೂಚನೆ

ವಿಷಯ: 2018–19ನೇ ಸಾಲಿನಲ್ಲಿ ನಡೆಯಲಿರುವ ಸಂಸ್ಕೃತ/ವೇದ, ಬಿ.ಎ. ಶಾಸ್ತ್ರಿ ಮತ್ತು ಸಂಸ್ಕೃತ/ವೇದ ಎಂ.ಎ.ಆಚಾರ್ಯ ದ್ವಿತೀಯಾ ಹಾಗೂ ಚತುರ್ಥ ಸೆಮಿಸ್ಟರ್ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.

| ಅಭ್ಯರ್ಥಿಗಳಿಂದ ಅರ್ಜಿಗಳನ್ನು ಹಾಗೂ ಡಿ.ಡಿ.ಯನ್ನುಸ್ವೀಕರಿಸುವ ಕೊನೆಯ ದಿನಾಂಕ | ವಿಳಂಬ ಶುಲ್ಕದೊಂದಿಗೆ ಬ್ಯಾಂಕ್ ಹುಂಡಿ ತೆಗೆಯುವ ದಿನಾಂಕ | ಬ್ಯಾಂಕ್ ಹುಂಡಿಗಳ ಸಹಿತ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ತಲುಪಿಸುವ ದಿನಾಂಕ |
|---|---|---|
| 11.03.2019 | 15.03.2019 | 21.03.2019 |

**ಸೂಚನೆಗಳು:**

1. ಎಲ್ಲಾ ಮಹಾವಿದ್ಯಾಲಯಗಳು ಕಡ್ಡಾಯವಾಗಿ ತಮ್ಮ ಕಾಲೇಜಿನ ಮಾನ್ಯತೆ ಪತ್ರವನ್ನು ಪರೀಕ್ಷಾಂಗಕ್ಕೆ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶ ಕೊಡುವುದಿಲ್ಲ.
2. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಅಧಿಕೃತ ಮಾನ್ಯತೆ ಪಡೆದ ಖಾಸಗಿ ಹಾಗೂ ಸರ್ಕಾರಿ ಸಂಸ್ಕೃತ ಕಾಲೇಜುಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.
3. ಪರೀಕ್ಷಾ ಶುಲ್ಕದ ಹುಂಡಿ (ಡಿ.ಡಿ.)ಯನ್ನು **"ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು (Finance Officer, Karnataka Samskrit University, Bangalore)"** ಈ ಹೆಸರಿನಲ್ಲಿ ಪಡೆದು ನಿಗದಿತ ದಿನಾಂಕದಂದು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
4. ಸಂಸ್ಕೃತ/ವೇದ ಬಿ.ಎ.ಶಾಸ್ತ್ರಿ ತರಗತಿಗಳ ಪರೀಕ್ಷೆಗಳು ನಿಗಧಿಪಡಿಸಿರುವ ಹೊಸ ಪಠ್ಯಕ್ರಮದಂತೆ ನಡೆಯುತ್ತವೆ.
5. ಸಂಸ್ಕೃತ/ವೇದ ಬಿ.ಎ.ಶಾಸ್ತ್ರಿ ಮತು ಸಂಸ್ಕೃತ/ವೇದ **ಎಂ.ಎ** /ಆಚಾರ್ಯ ಕಾಲೇಜು ವಿದ್ಯಾರ್ಥಿ (ರೆಗ್ಯುಲರ್), ಪುನರಾವರ್ತಿತ ಅಭ್ಯರ್ಥಿಗಳಿಗೆ ಪ್ರತ್ಯೇಕ ಅರ್ಜಿ ನಮೂನೆಗಳಿರುವುದಿಲ್ಲ. ವಿಶ್ವವಿದ್ಯಾಲಯವು ನೀಡಿರುವ ಅಧಿಕೃತ ನಮೂನೆಯಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು. ನಿಗದಿತ ಅರ್ಜಿಗಳನ್ನು ತಮ್ಮ ಕಾಲೇಜಿನ ಪ್ರಾಚಾರ್ಯರ ಬಳಿ ಸ್ವೀಕರಿಸುವುದು, ಅಥವಾ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯತಕ್ಕದ್ದು. www.ksu.ac.in (home page-examination-applications-click here to view application form for examination 2018-19.)
6. ಅರ್ಜಿಗಳೊಂದಿಗೆ ಸಲ್ಲಿಸುವ ನಾಮಾಂಕಿತ ಪಟ್ಟಿಯಲ್ಲಿ ಕೇಂದ್ರ ಸಂಖ್ಯೆ, ಹೆಸರು ಹಾಗೂ ಕಾಲೇಜಿನ ಸಂಕೇತ ಸಂಖ್ಯೆ, ಹೆಸರು ಹಾಗೂ ಸಮೀಪದ ಅಂಚೆ ಕಛೇರಿಯ ಪಿನ್‌ಕೋಡ್ ನಂಬರ್‌ಗಳನ್ನು ಸ್ಪಷ್ಟವಾಗಿ ನಮೂದಿಸುವುದು.
7. ಪರೀಕ್ಷೆಯ ನಂತರ ವಿನಾಯಿತಿ ಕೋರಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

8. ಪರೀಕ್ಷೆ ತೆಗೆದುಕೊಳ್ಳುವ ಎಲ್ಲ ಅಭ್ಯರ್ಥಿಗಳಿಂದ ಇತ್ತೀಚಿನ ಎರಡು ಭಾವಚಿತ್ರಗಳನ್ನು ಪಡೆದು ಒಂದನ್ನು ಅರ್ಜಿಗೂ ಮತ್ತೊಂದನ್ನು ಪ್ರವೇಶ ಪತ್ರಕ್ಕೂ ಲಗತ್ತಿಸಿ ಪ್ರಾಚಾರ್ಯರು ದೃಢೀಕರಿಸಿ ಕಳುಹಿಸುವುದು.
9. ಪುನರಾವರ್ತಿತ (ರಿಪೀಟರ್) ಅಭ್ಯರ್ಥಿಗಳು ಈ ಹಿಂದೆ ಪರೀಕ್ಷೆ ತೆಗೆದುಕೊಂಡಿದ್ದ ಕಾಲೇಜಿನ ಮೂಲಕವೇ ಅರ್ಜಿ ಸಲ್ಲಿಸುವುದು. ಕೇಂದ್ರ ಬದಲಾವಣೆ ಹೊಂದಿದ ಹಾಗೂ ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇಂತಹ ಪ್ರಸಂಗಕ್ಕೆ ಕಾಲೇಜುಗಳ ಪ್ರಾಚಾರ್ಯರು ಹೊಣೆಗಾರರಾಗಿರುತ್ತಾರೆ.
10. ತರಗತಿವಾರು ಪರೀಕ್ಷಾ ಶುಲ್ಕವನ್ನು ಈ ಕೆಳಕಂಡ ಪಟ್ಟಿಯಲ್ಲಿ ತಿಳಿಸಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ದೃಢೀಕರಿಸಿ ಕಳುಹಿಸುವುದು. ನಕಲು ಪ್ರಮಾಣಪತ್ರಗಳು ಇಲ್ಲದಿದ್ದಲ್ಲಿ ಪೂರ್ಣ ಶುಲ್ಕವನ್ನು ಭರಿಸಬೇಕು. ಇಲ್ಲದಿದ್ದಲ್ಲಿ ಅರ್ಜಿ ತಿರಸ್ಕರಿಸಲಾಗುವುದು.
11. **ಶುಲ್ಕದ ವಿವರ:**

| ಕ್ರ. ಸಂ | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ | ಅರ್ಜಿ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಮೊತ್ತ | ವಿಳಂಬ ಶುಲ್ಕ |
|---|---|---|---|---|---|---|
| 1. | ಸಂಸ್ಕೃತ/ ವೇದ ಬಿ.ಎ. ಶಾಸ್ತ್ರಿ | 320.00 | 10.00 | 20.00 | 350.00 | 100.00 |
| 2. | ಸಂಸ್ಕೃತ/ ವೇದ ಎಂ.ಎ /ಆಚಾರ್ಯ | 470.00 | 10.00 | 20.00 | 500.00 | 100.00 |
| 3. | ಪುನರಾವರ್ತಿತ ವಿದ್ಯಾರ್ಥಿಗಳಿಗೆ | ಪ್ರತಿ ವಿಷಯಕ್ಕೆ 200 ಮಾತ್ರ(ಒಂದು ಪತ್ರಿಕೆಗಿಂತ ಹೆಚ್ಚು ಪತ್ರಿಕೆಗಳಿಗೆ ಪೂರ್ಣ ಶುಲ್ಕವನ್ನು ಭರಿಸತಕ್ಕದ್ದು.) | – | – | – | – |
| 4. | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1 ವಿದ್ಯಾರ್ಥಿಗಳಿಗೆ | ವಿನಾಯಿತಿ | 10.00 | 20.00 | 30.00 | 100.00 |

12. ಅರ್ಜಿಯಲ್ಲಿ ಕಡ್ಡಾಯವಾಗಿ ತಂದೆ ಹಾಗೂ ತಾಯಿಯ ಹೆಸರನ್ನು ನಮೂದಿಸುವುದು. ಜನ್ಮ ದಿನಾಂಕದ ನಕಲು ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು.
13. ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಾದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿ ಸಮೀಪದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು.
14. **ಈ ಹಿಂದೆ ತೇರ್ಗಡೆಯಾಗಿರುವ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ಅರ್ಜಿಯ ಜೊತೆ ಲಗತ್ತಿಸುವುದು. (ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು).**
15. ಯಾವುದೇ ಅಭ್ಯರ್ಥಿಗಳು ನೇರವಾಗಿ ಶಾಸ್ತ್ರಿ ಮತ್ತು ಆಚಾರ್ಯ ಅಂತಿಮ ವರ್ಷದ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
16. ಯಾವುದೇ ಸಂಸ್ಕೃತ ಕಾಲೇಜಿನಲ್ಲಿ ಉದ್ಯೋಗದಲ್ಲಿರುವವರು/ ಖಾಸಗಿ ಉದ್ಯೋಗಿಗಳು ಕಾಲೇಜಿನಲ್ಲಿ ರೆಗ್ಯುಲರ್ ವಿದ್ಯಾರ್ಥಿಗಳಾಗಿ ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ.
17. ಹೊರ ರಾಜ್ಯದಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡಿ ಪ್ರಮಾಣ ಪತ್ರವನ್ನು ನೀಡಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪ್ರಮಾಣ ಪತ್ರವು ವಿಶ್ವವಿದ್ಯಾಲಯದ ಪ್ರವೇಶಾರ್ಹತೆಯ ನಿಯಮಾವಳಿಗೆ ಅನುಗುಣವಾಗಿದ್ದಲಿ ಮಾತ್ರ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು, ಅನ್ಯಥಾ ತಿರಸ್ಕರಿಸಲಾಗುವುದು.
18. ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬದ್ಧ ಮಾಹಿತಿಗಳನ್ನು Microsoft word, pdf, image ನಲ್ಲಿ ಕಳುಹಿಸಬಾರದು. ಕೇವಲ Microsoft excel sheet ನಲ್ಲಿ ಕಳುಹಿಸಬೇಕು. Font size-

12. Font name- Cambria (Headings). ವಿದ್ಯಾರ್ಥಿಗಳ ಮಾಹಿತಿಯನ್ನು ಸಿಡಿಯಲ್ಲಿ ಕಳುಹಿಸುವುದರ ಬದಲಾಗಿ examksu2016@gmail.com ಈ ಇ–ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು. ಮತ್ತು ಪ್ರತಿಯನ್ನು (hard copy) ಪರೀಕ್ಷಾ ನಿಯಂತ್ರಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ–18 ಈ ವಿಳಾಸಕ್ಕೆ ಕಳುಹಿಸುವುದು.

19. ಬಿ.ಎ. ಸಂಸ್ಕೃತ/ವೇದ ಶಾಸ್ತ್ರಿ ಪ್ರಥಮ, ದ್ವಿತೀಯ ಮತ್ತು ತೃತೀಯಾ ವರ್ಷ, ಹಾಗೂ ಎಂ.ಎ. ಸಂಸ್ಕೃತ/ವೇದ ಆಚಾರ್ಯ ದ್ವಿತೀಯ ಹಾಗೂ ಚತುರ್ಥಸೆಮಿಸ್ಟರ್. ಈ ಎಲ್ಲಾ ನಾಲ್ಕು ವಿಭಾಗಗಳ ವಿದ್ಯಾರ್ಥಿಗಳ ಅರ್ಜಿ ಮತ್ತು ನಾಮಾಂಕಿತ ಪಟ್ಟಿಗಳನ್ನು ತರಗತಿವಾರು, ಪ್ರತ್ಯೇಕವಾಗಿ ಸಲ್ಲಿಸುವುದು. ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿರುವ 2 ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸಬೇಕು. ನಮೂನೆ 2 ರಲ್ಲಿ ಐಚ್ಛಿಕ ವಿಷಯ ಮತ್ತು ವಿನಾಯಿತಿ ಇರುವ ವಿಷಯಗಳನ್ನು ಸ್ಪಷ್ಟವಾಗಿ ನಮೂದಿಸುವುದು.

20. ಶಾಸ್ತ್ರಿ ದ್ವಿತೀಯ ಮತ್ತು ತೃತೀಯ ವರ್ಷಗಳ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆಗಳನ್ನು ಈಗಾಗಲೇ ಪ್ರಥಮ ವರ್ಷದಲ್ಲಿ ನೀಡಿರುವಂತೆ ನಾಮಾಂಕಿತ ಪಟ್ಟಿಯಲ್ಲಿ ನಮೂದಿಸಿ ಕಾಲೇಜಿನ ಪ್ರಾಚಾರ್ಯರೇ ದೃಢೀಕರಿಸಿ ಸಲ್ಲಿಸುವುದು. ಪುನರಾವರ್ತಿತ ಅಭ್ಯರ್ಥಿಗಳಿಗೆ ಈ ಹಿಂದೆ ನೀಡಿದ ನೋಂದಣಿ ಸಂಖ್ಯೆಗಳನ್ನೇ ನಾಮಾಂಕಿತ ಪಟ್ಟಿಯಲ್ಲಿ ನಮೂದಿಸತಕ್ಕದ್ದು. ಶಾಸ್ತ್ರಿ ಪ್ರಥಮ ವರ್ಷದ ನೋಂದಣಿ ಸಂಖ್ಯೆಯನ್ನು ವಿಶ್ವವಿದ್ಯಾಲಯವು ನೀಡುತ್ತದೆ.

21. ನೋಂದಣಿ ಸಂಖ್ಯೆಗಳು ಕ್ರಮ ಸಂಖ್ಯೆಯಲ್ಲಿ ಇರತಕ್ಕದ್ದು. ಇಲ್ಲದಿದ್ದಲ್ಲಿ ಫಲಿತಾಂಶ ಪ್ರಕಟಣೆ ಸಂದರ್ಭದಲ್ಲಿ ಗೊಂದಲವುಂಟಾಗುವ ಸಾಧ್ಯತೆ ಇರುತ್ತದೆ. ಎಲ್ಲಾ ಪುನರಾವರ್ತಿತ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳನ್ನು ಕೊನೆಯಲ್ಲಿ ಸೇರಿಸಬೇಕು.

22. ತರಗತಿವಾರು ಸಿದ್ಧಪಡಿಸಿದ ನಾಮಾಂಕಿತ ಪಟ್ಟಿಯ ಕೊನೆಯಲ್ಲಿ ಆಯಾಯ ಶಾಸ್ತ್ರಭಾಗಗಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ವರ್ಷ ಹಾಗೂ ಶುಲ್ಕದ ವಿವರಗಳನ್ನು ಸರಿಯಾಗಿ ನಮೂದಿಸುವುದು.

23. ಆಚಾರ್ಯ ತರಗತಿಗಳ ಕಾಲೇಜು, ಹಾಗೂ ಪುನರಾವರ್ತಿತ ಅಭ್ಯರ್ಥಿಗಳಿಗೆ ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿಯೊಂದು ಪತ್ರಿಕೆಗಳಿಗೆ 70 ಅಂಕಗಳನ್ನು, ಇನ್ನುಳಿದ 30 ಅಂಕಗಳನ್ನು ಆಂತರಿಕ ಪರೀಕ್ಷೆಗಳಿಗಾಗಿ (Assignment/ Project Work) ನಿಗದಿಪಡಿಸಲಾಗಿದೆ. ಈ ಆಂತರಿಕ ಪರೀಕ್ಷೆಗಳನ್ನು ಆಯಾಯ ಕಾಲೇಜುಗಳ ಪ್ರಾಚಾರ್ಯರೇ ನಡೆಸಿ ಆ ಅಂಕಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವುದು. ಶಾಸ್ತ್ರಿ ಪ್ರಥಮ ವರ್ಷ(B.A I)ದ ಪರಿಸರ ಅಧ್ಯಯನದ ಗ್ರೇಡ್‌ನ್ನು ಆಯಾಯ ಕಾಲೇಜುಗಳ ಪ್ರಾಚಾರ್ಯರೇ ದೃಡೀಕರಿಸಿ ಸಲ್ಲಿಸತಕ್ಕದ್ದು.

24. ಬಿ.ಎ. ಶಾಸ್ತ್ರೀ ಪರೀಕ್ಷೆಯ ಒಂದು ಶಾಸ್ತ್ರಭಾಗದಲ್ಲಿ ಉತ್ತೀರ್ಣಗೊಂಡು ಮತ್ತೊಂದು ಶಾಸ್ತ್ರದ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಆಯಾಯ ಶಾಸ್ತ್ರದ ವಿದ್ವನ್ಮಧ್ಯಮಾ ಮೊದಲನೆಯ ವರ್ಷ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಯಾವುದೇ ಪತ್ರಿಕೆಯಲ್ಲಿ ವಿನಾಯಿತಿ ಇರುವುದಿಲ್ಲ.

25. ಕಾಲೇಜುಗಳು ಆವೇದನ ಪತ್ರಗಳ ಜೊತೆಗೆ ವಿದ್ಯಾರ್ಥಿಗಳ ಆಂತರಿಕ ಅಂಕಗಳಪಟ್ಟಿಯನ್ನು ಪ್ರಾಚಾರ್ಯರು ದೃಢೀಕರಿಸಿ ಕಳುಹಿಸಿಕೊಡುವುದು ಆಂತರಿಕ ಮೌಲ್ಯಮಾಪನದ ಅಂಕಗಳಿಲ್ಲದ ಆವೇದನಪತ್ರಗಳನ್ನು ತಿರಸ್ಕರಿಸಲಾಗುವುದು.

26. **ಅನುದಾನಿತ ಸಂಸ್ಕೃತ ಕಾಲೇಜುಗಳು ಹೊಸದಾಗಿ ಶಾಸ್ತ್ರವಿಭಾಗವನ್ನು ಪ್ರಾರಂಭ ಮಾಡಿದ್ದಲ್ಲಿ ವಿಶ್ವವಿದ್ಯಾಲಯದಿಂದ ಪಡೆದ ಅನುಮತಿ ಪತ್ರ ಲಗತ್ತಿಸತಕ್ಕದ್ದು ಮತ್ತು ಈ ಶಾಸ್ತ್ರಗಳು ಯಾವ ವರ್ಷದವರೆಗೆ ಮಾನ್ಯತೆ ಹೊಂದಿರುತ್ತದೆ ಎಂಬುದನ್ನೂ ತಿಳಿಸಬೇಕು ಹಾಗೂ ಅನುದಾನರಹಿತ ಸಂಸ್ಕೃತ ಕಾಲೇಜುಗಳ ಮಾನ್ಯತೆ ಪತ್ರ ಲಗತ್ತಿಸಬೇಕು.**

27. ನಾಮಾಂಕಿತ ಪಟ್ಟಿಗಳಲ್ಲಿ ಮತ್ತು ಅರ್ಜಿ ನಮೂನೆಗಳಲ್ಲಿ ಏನಾದರೂ ದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರು ನೇರ ಹೊಣೆಗಾರರಾಗಿರುತ್ತಾರೆ.
28. ಕನಿಷ್ಠ ಶೇಕಡ 75ರಷ್ಟು ಹಾಜರಾತಿಯನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳು ಹೊಂದಿರಬೇಕಾಗಿದ್ದು, ಪ್ರಾಚಾರ್ಯರು ಇದನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.

**ಆದೇಶದ ಮೇರೆಗೆ,**

Sd/-
**ಪರೀಕ್ಷಾ ನಿಯಂತ್ರಕರು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

# SAMPLE

| FORM-01 | | | | | | | | | | |
|---|---|---|---|---|---|---|---|---|---|---|
| **KARNATAKA SAMSKRIT UNIVERSITY, CHAMARAJPETE, BAN-18** | | | | | | | | | | |
| **NAME OF THE COLLEGE & CODE:** | | | | | | | | | | |
| **NAME OF THE COURSE:** | | | | | | | | | | |
| SL.NO | REG NO | NAME OF THE STUDENTS | FATHER'S NAME | SUBJECT | I | II | III | IV | V | VI |
| 1 | | SHRUTHI H M | MUNIYAPPA | ALANKARA | | | | | | |
| 2 | | SHRIVANI K E | APPORAO K | ALANKARA | | | | | | |
| 3 | | SURESH BABU | RAMASWAMY | VYAKARANA | | | | | | |
| 4 | | VINUTHA B T | THIPPESWAMY | VYAKARANA | | | | | | |
| DETAILS OF NR | | | | | | | | | | |
| | | CLASS | SUBJECT | NUMBER OF STUDENTS | | | | | | |
| 1 | | BA-I | ALANKARA | 01 | | | | | | |
| 2 | | MA-II | SV VEDANTA | 01 | | | | | | |
| Email ID of college :- | | | | | | | | | | |
| Principal contact number | | | | | | | | | | |

# SAMPLE

| FORM-02 | | | | | | | | | |
|---|---|---|---|---|---|---|---|---|---|
| **KARNATAKA SAMSKRIT UNIVERSITY, CHAMARAJPETE, BAN-18** | | | | | | | | | |
| **NAME OF THE COLLEGE & CODE:** | | | | | | | | | |
| **NAME OF THE COURSE:** | | | | | | | | | |
| SL.NO | COURSE | NAME OF THE STUDENTS | SUBJECT | FATHER'S NAME | MOTHER'S NAME | GENDER | CASTE | FEE PAID | DD/ RECIEPT NO |
| 1 | | SHRUTHI H M | ALANKARA | MUNIYAPPA | RANGAMMA | MALE | GENARAL | 500 | 456099 |
| 2 | | SHRIVANI K E | ALANKARA | APPORAO K | VASUMATI | MALE | SC | 30 | 456099 |
| 3 | | SURESH BABU | VYAKARANA | RAMASWAMY | SAVITRI | FEMALE | ST | 30 | 456099 |
| 4 | | VINUTHA B T | VYAKARANA | THIPPESWAMY | GAYATRI | MALE | 1-A | 30 | 456099 |
| DETAILS OF NR | | | | | | | | | |
| | | CLASS | CASTE | NUMBER OF STUDENTS | | | | | |
| 1 | | BA-I | GENARAL | 01 | | | | | |
| 2 | | BA-II | SC | 01 | | | | | |
| 3 | | BA-III | ST | 01 | | | | | |
| Principal contact number:- | | | | | | | | | |
| Email ID of college :- | | | | | | | | | |